ಕರ್ನಾಟಕ ಸರ್ಕಾರ
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 :** **ಜುಲೈ 27, 2020**

# ಪತ್ರಿಕಾ ಪ್ರಕಟಣೆ

## ಸರ್ವಜನಾಂಗದ ಅಭಿವೃದ್ಧಿಯೇ ನಮ್ಮ ಸರ್ಕಾರದ ಮೂಲ ಉದ್ದೇಶ

– ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ.

ಬೆಂಗಳೂರು, ಜುಲೈ 27 (ಕರ್ನಾಟಕ ವಾರ್ತೆ):

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳು ಸೇರಿದಂತೆ ಸಮಾಜದ ಎಲ್ಲ ವರ್ಗಗಳ ಹಿಂದುಳಿದವರು ನೆಮ್ಮದಿಯ ಬಾಳು ಕಾಣಬೇಕು, ಕರ್ನಾಟಕದಲ್ಲಿ ಇನ್ನು ಮೂರು ವರ್ಷದಲ್ಲಿ ಎಲ್ಲರಿಗೂ ಸೂರು ಸಿಗುವಂತಾಗಬೇಕು ಎಂಬುದು ನಮ್ಮ ಸರ್ಕಾರದ ಪ್ರಮುಖ ಆಶಯವಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಸರ್ಕಾರವು ಒಂದು ವರ್ಷ ಪೂರೈಸಿದ ಸಂಬಂಧ ಇಂದು ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ನವ ತಂತ್ರಜ್ಞಾನವನ್ನು ಅಳವಡಿಸಿಕೊಂಡು ರೂಪಿಸಲಾದ ರಾಜ್ಯದಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಏಕಕಾಲದಲ್ಲಿ ನೇರ ಪ್ರಸಾರದಲ್ಲಿ ಆಯೋಜಿಸಲಾಗಿದ್ದ **"ಸವಾಲುಗಳ ವರ್ಷ ಪರಿಹಾರದ ಸ್ಪರ್ಶ"** ಕಾರ್ಯಕ್ರಮದಲ್ಲಿ ಸರ್ಕಾರದ ಒಂದು ವರ್ಷದ ಕಾರ್ಯನಿರ್ವಹಣಾ ವರದಿ ಪುಸ್ತಕ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಮಹದೇವ್ ಪ್ರಕಾಶ್ ಅವರ ಸಂಪಾದನೆಯ ಪುಸ್ತಕ "ಪುಟಕಿಟ್ಟ ಚಿನ್ನ" ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ "ವಾರ್ತಾ ಜನಪದ" ಮತ್ತು "ಮಾರ್ಚ್ ಆಫ್ ಕರ್ನಾಟಕ ಮಾಸಿಕ"ಗಳ ವಿಶೇಷ ಸಂಚಿಕೆಗಳನ್ನು ಬಿಡುಗಡೆ ಮಾತನಾಡಿದ ಅವರು ನಮ್ಮ ಸರ್ಕಾರವು ಕಳೆದ ಒಂದು ವರ್ಷದಲ್ಲಿ ಹಲವಾರು ಅಡ್ಡಿ ಅತಂಕಗಳ ನಡುವೆ ಪ್ರಗತಿಯ ಪಥ ಚಕ್ರ ಸ್ಥಗಿತವಾಗದಂತೆ ನೋಡಿಕೊಂಡು ಮುನ್ನಡೆದಿದೆ ಎಂದರು.

ಸರಳ, ಸಜ್ಜನಿಕೆ, ಪ್ರಾಮಾಣಿಕ ವ್ಯಕ್ತಿ ಮಾಜಿ ರಾಷ್ಟ್ರಪತಿ ಎ.ಪಿ.ಜೆ ಅಬ್ದುಲ್ ಕಲಾಂರವರ ಪುಣ್ಯ ಸ್ಮರಣೆಯ ದಿನ ಇಂದು ಅವರು ತೋರಿಸಿದ ದಾರಿದೀಪದಲ್ಲಿ ನನ್ನ ನಡೆ ಎಂದ ಬಿ.ಎಸ್.ವೈ, ನಾನು ಈ ಹಿಂದೆ ನವದೆಹಲಿಗೆ ಹೋದಂತಹ ಸಮಯದಲ್ಲಿ ಮಾಜಿ ರಾಷ್ಟ್ರಪತಿ ಎ.ಪಿ.ಜೆ ಅಬ್ದುಲ್ ಕಲಾಂ ಅವರನ್ನು

ಭೇಟಿಯಾಗುತ್ತಿದ್ದೆ. ಭೇಟಿಯಾದ ಸಮಯದಲ್ಲಿ ಅವರು ರಾಜ್ಯ ಹಣಕಾಸು, ಅಭಿವೃದ್ಧಿಯ ಬಗ್ಗೆ ಸಲಹೆಗಳನ್ನು ನೀಡುತ್ತಿದ್ದರು. ಅವರ ಸಲಹೆಗಳನ್ನು ನಾನು ಚಾಚೂ ತಪ್ಪದೆ. ಪಾಲಿಸುತ್ತಿದ್ದೆನೆ ಎಂದು ತಿಳಿಸಿದರು.

ಪ್ರಧಾನಿಗಳ ಅರ್ಶಿವಾದ ಹಾಗೂ ಸಚಿವ ಸಂಪುಟದ ಸದಸ್ಯರು, ಶಾಸಕರು, ನಿಮ್ಮೆಲ್ಲರ ಸಹಕಾರದಿಂದ ಸರ್ಕಾರವು ಅಭಿವೃದ್ದಿಯಡೆಗೆ ಸಾಗಿದೆ. ಕರ್ನಾಟಕದಲ್ಲಿ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಹೊಸದರಲ್ಲಿ ಬರದ ಛಾಯೆ ಎಲ್ಲೆಡೆ ಮೂಡಿತ್ತು. ನಂತರ ಕೆಲವೇ ದಿನಗಳಲ್ಲಿ ವರುಣನ ಕೃಪೆಯಿಂದ ಜಲಾಶಯಗಳು ತುಂಬಿದವು, ಕೆರೆ ಕಟ್ಟೆಗಳು ಕೋಡಿ ಹರಿದವು. ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಮನೆಗಳು ಜಲ ಪ್ರಳಯದಿಂದಾಗಿ ಹಾನಿಗೀಡಾವು. ಇಂತಹ ಸಮಯದಲ್ಲಿ ಏಕಾಂಗಿಯಾಗಿ, ಸುಮಾರು ಮೂರು-ನಾಲ್ಕು ತಿಂಗಳುಗಳ ಕಾಲ ಹೋರಾಟ ಮಾಡಿ ಜಲ ಪ್ರಳಯದಿಂದ ಮನೆ ಕಳೆದುಕೊಂಡವರನ್ನು ಶಾಲಾ ಕಾಲೇಜು ಕಟ್ಟಡಗಳಿಗೆ ಸ್ಥಳಾಂತರಿಸಿ, ಅವರ ನೆರವಿಗೆ ಧಾವಿಸಲಾಯಿತು. ಮನೆ ಕಳೆದುಕೊಂಡವರಿಗೆ ತಕ್ಷಣ ಮನೆ ಕಟ್ಟಿಕೊಳ್ಳಲು ಐದು ಲಕ್ಷ ರೂಗಳ ಪರಿಹಾರ ಧನ ಘೋಷಣೆ ಮಾಡಿ ನೆರವು ನೀಡಲಾಯಿತು. ಬರಪೀಡಿತ ಪ್ರದೇಶಗಳಲ್ಲಿ ಪರಿಹಾರೋಪಯಗಳನ್ನು ಒದಗಿಸುವುದರ ಜೊತೆಗೆ ತುರ್ತಾಗಿ ಪ್ರವಾಹ ಪೀಡಿತ ಜಿಲ್ಲೆಗಳ ರಕ್ಷಣೆ ಕೈಗೊಳ್ಳಲಾಯಿತು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಬರ ಮತ್ತು ಪ್ರವಾಹದಿಂದ ರಾಜ್ಯದಲ್ಲಿ ಸುಮಾರು ಮೂವತ್ತೈದು ಲಕ್ಷ ಕೋಟಿ ರೂಗಳಿಗೂ ಮೇಲೆ ನಷ್ಟ ಸಂಭವಿಸಿದೆ ಎಂದು ಅಂದಾಜು ಮಾಡಲಾಗಿದೆ. ಭೀಕರ ಮಳೆ ಮತ್ತು ಪ್ರವಾಹದಿಂದಾಗಿ ಲಕ್ಷಾಂತರ ಕುಟುಂಬಗಳು ನಿರ್ವಸತಿರಾಗಿದ್ದರು, ಹಲವು ಹೆಕ್ಟೇರ್ ಪ್ರದೇಶದಗಳಲ್ಲಿ ಬೆಳೆಗಳು ನಾಶವಾದವು. ನೆರೆ ಸಂತ್ರಸ್ತರಿಗೆ ತಕ್ಷಣ ಪರಿಹಾರ ಮತ್ತು ಪುನರ್ವಸತಿ ಒದಗಿಸಿ ಹಾನಿಗೀಡಾದ ಪ್ರದೇಶಗಳ ಪುನರ್‍ರಚನೆಗೆ ವ್ಯಾಪಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

**ರೈತ ಮತ್ತು ನೇಕಾರ ನನ್ನ ಎರಡು ಕಣ್ಣುಗಳು:**

ಪ್ರಧಾನ ಮಂತ್ರಿಗಳ **"ಕಿಸಾನ್ ಸಮ್ಮಾನ್"** ಯೋಜನೆ ಐತಿಹಾಸಿಕ ಯೋಜನೆಯಾಗಿದೆ. ಪ್ರತಿಯೊಬ್ಬ ರೈತನ ಖಾತೆಗೆ ಆರು ಸಾವಿರ ರೂಗಳ ನೆರವು ನೀಡಲಾಗಿದೆ. ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿದ ಎರಡು ಸಾವಿರ ರೂಪಾಯಿಗಳ ಜೊತೆಗೆ ರಾಜ್ಯ ಸರ್ಕಾರದಿಂದ ನಾಲ್ಕು ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿ ರೈತರ ಸಂಕಷ್ಟಕ್ಕೆ ಸ್ಪಂದಿಸಿದೆ. ಅದೇ ರೀತಿ ಕೈಮಗ್ಗ ನೇಕಾರರ ಚಟುವಟಿಕೆಗಳ ಪಾರಂಪಾರಿಕ ಕಲೆ ಮತ್ತು ಅವರ ಶ್ರಮವನ್ನು ಪರಿಗಣಿಸಿ ಹಾಗೂ ಆರ್ಥಿಕ ಹಿನ್ನೆಡೆಯಿಂದ ಸಂಕಷ್ಟದಲ್ಲಿರುವ ಕೈಮಗ್ಗ ನೇಕಾರರಿಗೆ 2020-21ನೇ ಸಾಲಿನಿಂದ ಅನ್ವಯವಾಗುವಂತೆ **"ನೇಕಾರ ಸಮ್ಮಾನ್"** ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲಾಗಿದೆ. ನೋಂದಾಯಿತ 54000 ಕೈಮಗ್ಗ ನೇಕಾರರಿಗೆ ಪ್ರತಿ ವರ್ಷ ರೂ. 2,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೀಡಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

**ನಮ್ಮ ಬೆಳೆ ನಮ್ಮ ಹಕ್ಕು**

ರೈತನು ತಾನು ಬೆಳದ ಬೆಳೆಯನ್ನು ತಾನೇ ನೇರವಾಗಿ ರಾಜ್ಯದ ಅಥವಾ ಬೇರೆ ರಾಜ್ಯಗಳಲ್ಲಿ ಮಾರಟ ಮಾಡಲು ಅನುಕೂಲವಾಗುವಂತೆ ಎ.ಪಿ.ಎಂಸಿ. ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಇದರಿಂದ ಮಧ್ಯವರ್ತಿಗಳ ಹಾವಳಿ ತಪ್ಪಿ, ನೇರ ಮಾರಾಟದಿಂದ ರೈತ ತಾನು ಬೆಳೆದ ಬೆಳೆಗೆ ಸೂಕ್ತ ಬೆಲೆಯನ್ನು ಪಡೆದು ನಿಟ್ಟುಸಿರು ಬಿಡುವಂತಾಗಿದೆ. ಇದರಿಂದ ಲಕ್ಷಾಂತರ ರೈತರಿಗೆ ನೆರವಾಗಿದೆ ಎಂದು ತಿಳಿಸದರು.

**ಎಲ್ಲಾ ಮನೆಗಳಿಗೆ ಶುದ್ಧ ಕುಡಿಯುವ ನೀರು.**

ಅಂತರ್ಜಲ ಕುಸಿತದಿಂದಾಗಿ ಅನೇಕ ಜಿಲ್ಲೆಗಳ ಗ್ರಾಮೀಣ ಭಾಗಗಳಲ್ಲಿ ಜನರು ಕುಡಿಯುವ ನೀರಿಗಾಗಿ ಹಪಹಿಸುತ್ತಿದ್ದು, ಈ ಬವಣೆಯನ್ನು ತಪ್ಪಿಸುವ ಸಂಬಂಧ ಕರ್ನಾಟಕದ ಎಲ್ಲಾ ಗ್ರಾಮೀಣ ಪ್ರದೇಶದ ಎಲ್ಲಾ ಮನೆಗಳಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಸಂಬಂಧ 8840 ಕೋಟಿ ರೂಗಳನ್ನು ಮೀಸಲಿರಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

**ಬೆಂಗಳೂರು ಅಂತತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪಾರ್ಕ್ ನಿರ್ಮಾಣ**

ಕೆಂಪೇಗೌಡರು ನಿರ್ಮಿಸಿದ ನಗರದ ಐತಿಹಾಸಿಕ ಹೆಜ್ಜೆ ಗುರುತುಗಳನ್ನು ಈಗಿನ ಕಾಲದವರಿಗೆ ಪರಿಚಯಿಸುತ್ತದೆ. ಕೆಂಪೇಗೌಡರ ಸಾಧನೆಗಳ ಮೂಲಕ ಅವರ ಸಮಗ್ರ ಕಥೆಯನ್ನು ಹಾಗೂ ಬೆಂಗಳೂರಿನ ಇತಿಹಾಸವನ್ನೂ ಕಟ್ಟಿಕೊಡಲಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ, ಬೆಂಗಳೂರಿಗೆ ಕೆಂಪೇಗೌಡರು ನೀಡಿರುವ ಕೊಡುಗೆ ಸ್ಮರಿಸುವ ಸಲುವಾಗಿ ಅವರನ್ನು ವಿಶ್ವಕ್ಕೆ ಪರಿಚಯಿಸಲು ರಾಜ್ಯ ಸರ್ಕಾರವು ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆಯ ಶಿಲಾನ್ಯಾಸ ಮಾಡಲಾಗಿದೆ. ಹಾಗೂ ಸೆಂಟ್ರಲ್ ಪಾರ್ಕ್ ನಿರ್ಮಾಣವನ್ನು ಕೂಡಲೇ ಮಾಡಲಾಗುವುದು ಎಂದು ತಿಳಿಸಿದರು.

**ದಿವಂಗತ ಅನಂತ್‌ಕುಮಾರರ ನೆನಪು:**

ಹಿರಿಯ ಮುತ್ಸದಿ ದಿವಂಗತ ಅನಂತ್ ಕುಮಾರ್‌ಅವರನ್ನು ಇದೇ ಸಮಯದಲ್ಲಿ ನೆನಪು ಮಾಡಿಕೊಂಡ ಸನ್ಮಾನ್ಯ ಮುಖ್ಯಮಂತ್ರಿಗಳು ಅನಂತ್ ಕುಮಾರರ ಕನಸಾಗಿದ್ದ Sub Urban Railway ರಾಜ್ಯದಲ್ಲಿ ತರಲು ಮಾನ್ಯ ಪ್ರಧಾನಮಂತ್ರಿಗಳೊಂದಿಗೆ ಮಾನತಾಡಿ ಕ್ರಮ ವಹಿಸಿಲಾಗಿದೆ. ಈ ಯೋಜನೆಗೆ ಬಹಳ ವೇಗವಾಗಿ ಚಾಲನೆ ನೀಡಲು ಕ್ರಮ ಕೈಗೊಂಡಿದ್ದೇವೆ ಎಂದು ಮುಖ್ಯಮಂತ್ರಿಗಳು ತಿಳಿಸದರು.

**ಹೆದ್ದಾರಿ ರಸ್ತೆಗಳ ನಿರ್ಮಾಣ / ನವೀಕರಣ:**

ರಾಷ್ಟ್ರೀಯ ಹೆದಾರಿಗಳುನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಪೂರ್ಣ ಮಾಡು ಉದ್ದೇಶ ನಮ್ಮ ಸರ್ಕಾರ ಹೊಂದಿದೆ. ಸುಮಾರು 970 ಕಿ.ಮೀ ಉದ್ದದ ಹೆದ್ದಾರಿ ರಸ್ತೆಗಳ ನಿರ್ಮಾಣ ಹಾಗೂ ನವೀಕರಣಕ್ಕೆ ಚಾಲನೆ ನೀಡಲಾಗಿದೆ. ರಸ್ತೆಗಳ ನಿಮಾಣ ಕಾರ್ಯಕ್ಕಾಗಿ 762 ಕೋಟಿ ರೂಗಳನ್ನು ಕೇಂದ್ರ ಸರ್ಕಾರ ನೀಡಿದೆ. ನಿರ್ಮಾಣ ಕಾರ್ಯ ಬರದಲ್ಲಿ ಸಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ನೀರಾವರಿ ಸಮಸ್ಯೆಗಳನ್ನು ಬಗೆ ಹರಿಸುವ ಸಂಬಂಧ ಮಹಾದಾಯಿ ಯೋಜನೆನ್ನು ಬಗೆಹರಿಸಲು ಕ್ರಮ ವಹಿಸಲಾಗಿದೆ. ಮೇಕೆದಾಟು ಯೋಜನೆಗೂ ಕ್ರಮ ವಹಿಸಿದ್ದು, ಸುಮಾರು 1130 ಕೆರೆಗಳಿಗೆ ನೀರು ತುಂಬಲಾಗುತ್ತಿದೆ. ಸದ್ಯ ರಾಜ್ಯದಲ್ಲಿ ವ್ಯಾಪಕ ಮಳೆಯಾಗುತ್ತಿದ್ದು, ಎಲ್ಲಾ ಜಲಾಶಯಗಳು ತುಂಬುತ್ತಿವೆ. ಇದರಿಮದ ಅಂತರ್ಜಲ ಕುಸಿತ ಕಡಿಮೆಯಾಗಿದೆ. ಎಲ್ಲಾ ಕೃಷಿಕರು ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ತಿಳಿಸಿದರು.

**ಪ್ರಾದೇಶಿಕ ಅಸಮತೋಲನೆ ನಿವಾರಣೆ:**

ಪ್ರಾಮಾಣಿಕ ಪ್ರಯತ್ನ ಮಾಡಿ ಡಾ॥ ನಂಜುಂಡಪ್ಪ ವರದಿಯನ್ನು ಜಾರಿಗೆ ತಂದು ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನವನ್ನು ಕಲ್ಪಿಸಲಾಗಿದೆ. ಹೈದ್ರಾಬಾದ್ ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ಎಂದು ಮರು ನಾಮಕರಣ ಮಾಡಲಾಗಿದೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿಗಾಗಿ ನಮ್ಮ ಸರ್ಕಾರವು ವಿಶೇಷ ಪ್ಯಾಕೇಜ್ ಘೋಷಣೆ ಮಾಡಿದೆ. ಇದರಿಂದ ಪ್ರಾದೇಶಿಕ ಅಸಮತೋಲನೆ ನಿವಾರಣೆಯಾಗುವುದು ಎಂದ ಮುಖ್ಯಮಂತ್ರಿಗಳು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ರಾಜ್ಯದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಸಂಕಲ್ಪ ಮಾಡಲಾಗಿದೆ ಎಂದರು.

**ಪ್ರಧಾನಿಗಳಿಂದ ಗೌರವ :**

ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿನ 28 ಸ್ಥಾನಗಳಲ್ಲಿ 25 ಸ್ಥಾನಗಳನ್ನು ತಮ್ಮ ಪಕ್ಷ ಗಲುವು ಸಾಧಿಸಿದಾಗ ಮಾನ್ಯ ಪ್ರಧಾನಿಗಳು ಸದಸ್ಯರ ಸಭೆಯಲ್ಲಿ ನಮ್ಮ ರಾಜ್ಯದ ಸಾಧನೆಯನ್ನು ಬಣ್ಣಿಸಿ ಎಲ್ಲಾರಿಂದ ಎದ್ದು ನಿಂತು ಚಪ್ಪಾಳೆಯನ್ನು ಹೊಡೆಸಿದ್ದರು ಎಂದು ಸ್ಮರಿಸಿಕೊಂಡರು. ರಾಜ್ಯದಲ್ಲಿ ಏಕಕಲಾದಲ್ಲಿ ನೆರೆ ಮತ್ತು ಬರ ಪರಿಸ್ಥಿತಿಯಂತಹ ಅಗಾಧ ಸವಾಲುಗಳನ್ನು ಎದುರಿಸಲು  ಸಂಪನ್ಮೂಲ ಕೊರತೆಯಿದ್ದು, ಕೇಂದ್ರದ ನೆರವು 1869 ಕೋಟಿ ರೂಗಳು ಸೇರಿದಂತೆ ಒಟ್ಟು 6018 ಕೋಟಿ ರೂಗಳನ್ನು ಒದಗಿಸಿಕೊಳ್ಳಲಾಯಿತು. ರಾಜ್ಯದಲ್ಲಿ ನಡೆದ ವಿಧಾನ ಸಭೆ ಉಪ ಚುನಾವಣೆಯಲ್ಲಿ 15 ಸ್ಥಾನಗಳಲ್ಲಿ 12 ಸ್ಥಾನಗಳನ್ನು ಗೆಲ್ಲುವ ಮೂಲ ಸರ್ಕಾರಕ್ಕೆ ಸ್ಥಿರತೆ ತರಲಾಯಿತು.

**ಮೊದಲು ಲಾಕ್‌ಡೌನ್ ಘೋಷಿಸಿದ ರಾಜ್ಯ ಕರ್ನಾಟಕ:**

ಕೋವಿಡ್ –19 ಸಾಂಕ್ರಾಮಿಕ ರೋಗ ನಿವಾರಣೆಗೆ ರಾಜ್ಯವು ಎಲ್ಲಾ ಕ್ರಮಗಳನ್ನು ವಹಿಸಿದೆ. ಮೊದಲು ಲಾಕ್‌ಡೌನ್ ಘೋಷಿಸಿದ ರಾಜ್ಯ ನಮ್ಮ ಕರ್ನಾಟಕ. ಮೊದಲ ಪ್ಯಾಕೇಜ್ ಪ್ರಕಟಣೆ ಮಾಡಿದ್ದು ಕರ್ನಾಟಕ. ಕೊರೋನಾ ಹಾವಳಿಯ ನಡುವೆಯೂ ಎಸ್.ಎಸ್.ಎಲ್.ಸಿ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿದೆ. ಪ್ರಾಥಮಿಕ ಹಂತದಲ್ಲಿ ಕೇಂದ್ರ ಹಾಗೂ ಇತರ ರಾಜ್ಯಗಳು ನಮ್ಮ ಮಾದರಿಯನ್ನು ಅನುಕರಿಸಿದ್ದು ನಮ್ಮ ಹೆಗ್ಗಳಿಕೆಯೇ ಸರಿ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

**ರಾಜ್ಯದ ಜನತೆಯ ಋಣ ತೀರಿಸಲು ಬದ್ದ:**

ರಾಜ್ಯದಲ್ಲಿ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ರಾಜ್ಯದ ಜನರು ನೆಮ್ಮದಿಯಿಂದ, ಗೌರವದಿಂದ ಬದಲು ಎಲ್ಲಾ ಕ್ರಮಗಳನ್ನು ವಹಿಸುತ್ತೇನೆ. ದ್ವೇಶದ ರಾಜಕಾರಣ ನಮ್ಮಲ್ಲಿ ಇಲ್ಲ. ಎಲ್ಲರ ಸಹಾರದಿಂದ ಅಭಿವೃದ್ಧಿಯ ಪಥದತ್ತ ಸಾಗಬೇಕಿದೆ ಎನ್ನುವುದು ನನ್ನ ಆಶಯ. ಕಾನೂನು ಸುವ್ಯವಸ್ಥೆಗೆ ಅವಕಾಶ, ಕೋಮುಗಲಭೆ ನಿವಾರಣೆ ನಿಮ್ಮೆಲ್ಲರ ಸಹಕಾರವೇ ಮುಖ್ಯ. ರಾಜ್ಯದ ಜನತೆಯ ಋಣ ನನ್ನ ಮೇಲೆ ಇದೆ ಅದನ್ನು ತೀರಿಸಲು ಸದಾ ಬದ್ದನಾಗಿದ್ದೇನೆ ಎಂದು ಮಾನ್ಯಮುಖ್ಯಮಂತ್ರಿಗಳು ತಿಳಿಸದರು.

**ಫಲಾನುಭವಿಗಳೊಂದಿಗೆ ಸಂವಾದ:**

ಸರ್ಕಾರಕ್ಕೆ ಒಂದು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ರಾಜ್ಯದ ಆಯ್ದ ಫಲಾನುಭವಿಗಳ ಜೊತೆ ಮಾನ್ಯ ಮುಖ್ಯಮಂತ್ರಿಗಳು ನವ ಮಾಧ್ಯಮದ ಮೂಲಕ ನೇರ ಸಂವಾದದಲ್ಲಿ ಭಾಗವಹಿಸಿದರು. ಈ ಸಮಯದಲ್ಲಿ ಎಲ್ಲಾ ಫಲಾನುಭವಿಗಳ ಮಾತುಗಳನ್ನು ಶಾಂತಚಿತ್ತದಿಂದ ಮಾನ್ಯ ಮುಖ್ಯಮಂತ್ರಿಗಳು ಆಲಿಸಿದರು. ರಾಜ್ಯ ಸರ್ಕಾರದ ಯೋಜನೆಯ ಲಾಭ ಪಡೆದ ಫಲಾನುಭವಿಗಳು ಮುಖ್ಯಮಂತ್ರಿಗಳ ಜೊತೆ ಮಾತನಾಡುವ ಸಮಯದಲ್ಲಿ ಖುಷಿಯಲ್ಲಿ ತೇಲಾಡಿದರು.

ಶಿವಮೊಗ್ಗದ ಮಂಜುಳ ಅವರು ಎರಡು ಹೆಣ್ಣು ಮಕ್ಕಳೊಂದಿಗೆ ಜೀವನ ನಡೆಸುತ್ತಿದ್ದು, ಅತಿಯಾದ ಮಳೆಯಿಂದಾಗಿ ಮನೆ ಬಿದ್ದು ಹೋದಾಗ ಮನೆ ಕಟ್ಟಲು ಹಣ ಕಾಸಿನ ತೊಂದರೆ ಉದ್ಭವವಾಯಿತು. ಅಂತಹ ಸಮಯದಲ್ಲಿ ಸರ್ಕಾರವು ನೆರವಿಗೆ ಬಂದು ಒಂದೇ ಸಲ 3 ಲಕ್ಷಗಳನ್ನು ನೀಡಿತು. ಇದರಿಂದ ನನಗೆ ದೇವರೇ ನೆರವು ನೀಡಿದಂತಾಯಿತು ಎಂದು ಹೇಳಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾಧಗಳನ್ನು ತಿಳಿಸಿದರು.

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಶಾಂತವೀರನಗೌಡ ಪಾಟೀಲ್ ಅರುವು ಪ್ರತಿಕ್ರಿಯಿಸಿ ಕೊರೋನಾ ಇದ್ದರೂ ಸಹ ಗ್ರಾಮೀಣ ಖಾತ್ರಿ ಯೋಜನೆಯಡಿ ನೆರುವು ನೀಡಲಾಗಿದ್ದು ನನಗೆ ಕೆಲಸ ಸಿಕ್ಕಿರುವುದರಿಂದ ನನಗೆ ಸಂತೋಷವಾಗಿದೆ. ಇದರಿಂದ ನನ್ನ ಕುಟುಂಬದ ನಿರ್ವಹಣೆ ನೆಡಯುತ್ತಿದೆ. ಎಂದು ತಿಳಿಸಿದರು.

ಬೆಳಗಾವಿಯ ಪವಿತ್ರ ಅರಭಾವಿ ಮಾತನಾಡಿ ಲಾಕ್‌ಡೌನ್ ಸಮಯದಲ್ಲಿ ತಂದೆ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದರು. ನನಗೆ ಔಷಧಿ ತರಲು ಕಷ್ಟವಾಗಿತ್ತು. ನಮ್ಮ ತಂದೆ ಕಿಡ್ನಿ ಸಮಸ್ಯೆಯಿಂದ ಬಳಲುತಿದ್ದರು. ಇಂತಹ ಸಮಯದಲ್ಲಿ ಸರ್ಕಾರ ನನ್ನ ನೆರವಿಗೆ ಬಂದು ಔಷಧಿಯನ್ನು ಕೊಡಿಸಿಕೊಟ್ಟರು. ನಾನು ಸರ್ಕಾರಕ್ಕೆ ಚಿರಋಣಿಯಾಗಿರುತ್ತೇನೆ ಎಂದರು.

ಮತ್ತೊಬ್ಬ ಫಲಾನುಭವಿ ಮೈಸೂರು ಜಿಲ್ಲೆಯ ನಂಜನಗೂಡಿನ ಬಸವಣ್ಣ ಅವರು ಮಾತನಾಡಿ ಕಪಿಲ ನದಿ ತೀರಲದಲಿ ವಾಸವಿದ್ದ ನಾವು ಪ್ರವಾಹ ಬಂದು ಮನೆಗಳೆಲ್ಲ ಕೊಚ್ಚಿಹೋದವು ಅಂತಹ ಸಮಯದಲ್ಲಿ ಜಿಲ್ಲಾಡಳಿತ ಹಾಗೂ ತಾಲ್ಲೂಕು ಕೇಂದ್ರಗಳು ನಮ್ಮ ನೆರವಿಗೆ ಬಂದವು. ಮನೆ ಮಠ ಕಳೆದುಕೊಂಡವರಿಗೆ ಸೌಲಭ್ಯ ಕಲ್ಪಿಸಿತು ಎಂದು ಸರ್ಕಾರಕ್ಕೆ ತಮ್ಮ ಧನ್ಯವಾದಗಳನ್ನು ಸಲ್ಲಿಸಿದರು.

ತುಮಕೂರಿನ ಫಲಾನುಭವಿ ಕಲಾವತಿ ಅವರು ಮಾತನಾಡಿ, ಸ್ಟಾಫ್ ನರ್ಸ್ ಆಗಿರುವ ನಾನು ಕೋವಿಡ್–19 ಸಾಂಕ್ರಮಿಕ ರೋಗಕ್ಕೆ ಒಳಗಾದಗ, ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಗಳು ನನಗೆ ಮಾನಸಿಕ ಸ್ಥೈರ್ಯ ತುಂಬಿದರು. ಅವರು ನೀಡಿದ ಧೈರ್ಯದಿಂದಾಗಿ ನಾನು ಬಹಳ ಬೇಗ ಗುಣಮುಖಳಾಗಿದ್ದೇನೆ. ಈಗಲೂ ನಾನು ನರ್ಸ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಸರ್ಕಾರದ ಸ್ಫೂರ್ತಿಯಿಂದ ಬೇಗ ಗುಣಮುಖವಾಗಿದ್ದು, ಸರ್ಕಾರಕ್ಕೆ ತಮ್ಮ ಧನ್ಯವಾದಗಳನ್ನು ಸಲ್ಲಿಸಿದರು.

ಹಾಸನದ ಪುಷ್ಪ ಮಡಿವಾಳ ಮಾತನಾಡಿ, ಕೋವಿಡ್ ಸಮಯದಲ್ಲಿ ನಮಗೆ ಕೆಲಸವೇ ಇರಲಿಲ್ಲ. ಇದರಿಂದ ಜೀವನ ನಡೆಸುವುದೇ ಕಷ್ಟವಾಗಿತ್ತು. ಇಂತಹ ಸಮಯದಲ್ಲಿ ಸರ್ಕಾರ ಪರಿಹಾರ ಧನವನ್ನು ಘೋಷಿಸಿತು. ಇದರಿಂದ ನಾವು ಪರಿಹಾರ ಪಡೆದಿದ್ದೇವೆ. ನೆಮ್ಮದಿಯ ಜೀವನ ನಡೆಸುವಂತಾಗಿದೆ ಎಂದು ಹೇಳಿದರು.

ಹಿರಿಯೂರು ತಾಲ್ಲೂಕಿನ ವಸಂತ ಕುಮಾರಿ ರೈತ ಮಹಿಳೆ ಮಾತನಾಡಿ ಕೊರೋನಾ ಲಾಕ್‌ಡೌನ್ ಸಮಯದಲ್ಲಿ ನಾವು ಬೆಳೆದ ಈರುಳ್ಳಿ ಬೆಳೆಯನ್ನು ಹೇಗೆ ಮಾರಾಟ ಮಾಡುವುದು ಎಂದು ದಿಕ್ಕು ತೋಚದಂತಾಗಿತ್ತು. ಅಂತಹ ಸಮಯದಲ್ಲಿ ಸರ್ಕಾರದ ಸಾಮಜಿಕ ಜಾಲತಾಣದಿಂದ ಸಿಕ್ಕ ಸಲಹೆಯ ಮೇರೆಗೆ ನಮ್ಮ ಸಮಸ್ಯೆ ಬಗೆಹರಿಯಿತು. ತಕ್ಷಣ ನಮ್ಮ ಸಮಸ್ಯೆಗೆ ಸರ್ಕಾರ ಸ್ಪಂದಿಸಿತು ಎಂದು ತಮ್ಮ ಧನ್ಯವಾಧಗಳನ್ನು ಮುಖ್ಯಮಂತ್ರಿಗಳಿಗೆ ತಿಳಿದರು.

ಶಿಡ್ಲಘಟ್ಟ ತಾಲ್ಲೂಕು ಬೈಯಪ್ಪನಹಳ್ಳಿಯ ಗ್ರಾಮದ ಬಿ.ಎಲ್. ರವಿಚಂದ್ರ ಮಾತನಾಡಿ, ಲಾಕ್‌ಡೌನ್ ಸಮಯದಲ್ಲಿ ನಾವು ನೇಯ್ಕೆ ಮಾಡಿದ ರೇಷ್ಮೇ ಸೀರೆಗಳು ಮಾರಾಟವಾಗದೆ ಸ್ಟಾಕ್ ಆದವು. ಜೀವನ ನಡೆಸುವುದೇ ಕಷ್ಟವಾಯಿತು. ಇಂತಹ ಸಮಯದಲ್ಲಿ ಸರ್ಕಾರವು ನೇಕಾರರಿಗೆ ಪ್ರೋತ್ಸಾಹ ಧನ ಘೋಷಣೆ ಮಾಡಿತು. ಇದರಿಂದ ನಮಗೆ ತುಂಬಾ ಸಹಾಯವಾಯಿತು ಎಂದು ಮುಖ್ಯಮಂತ್ರಿಗಳಲ್ಲಿ ತಮಗೆ ದೊರೆತ ನೆರವಿನ ಬಗ್ಗೆ ವಿಶ್ಲೇಶಿಸಿದರು.

ಹಾವೇರಿಯ ಜ್ಯೋತಿ ಅವರು ಮಾತನಾಡಿ ನೆರೆಯಿಂದ ನಮ್ಮ ಮನೆ ಕುಸಿಯಿತು. ನಮಗೆ ನೆಲೆಯಿಲ್ಲದಾಯಿತು. ಇಂತಹ ಸಮಯದಲ್ಲಿ ಸರ್ಕಾರದಿಂದ ದೊರೆತ 5 ಲ್ಕಷಗಳ ಪರಿಹಾರದಿಂದಾಗಿ ನಾವು ಮತ್ತೆ ಬದುಕು ಕಟ್ಟಿಕೊಳ್ಳಲು ಸಾಧ್ಯವಾಯಿತು ಎಂದು ತಿಳಿಸಿದರು.

ಧಾರವಾಡ ಜಿಲ್ಲೆಯ ಗುರ್ಗಪ್ಪ ಹನುಮಂತಪ್ಪ ಕಟ್ಟಡ ಕಾರ್ಮಿಕ ಮಾತನಾಡಿ  ಕೋವಿಡ್ ಸಮಯದಲ್ಲಿ ಕಾಮಿಕರಿಗೆ ನೀಡಿರುವ ನೆರವನ್ನು ಶ್ಲಾಘಿಸಿದರು. ಕೆಲಸವಿಲ್ಲದ ಸಮಯದಲ್ಲಿ ಕಾರ್ಮಿಕರಿಗೆ ಪರಿಹಾರ ಧನವಾಗಿ ಸರ್ಕಾರವು ತಲಾ ಐದು ಸಾವಿರ ರೂಪಾಯಿಗಳನ್ನು ಘೋಷಿಸಿರುವುದಕ್ಕೆ ಧನ್ಯವಾಧಗಳನ್ನು ಸಲ್ಲಿಸಿದರು.

**ರಾಮನಗರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪದವಿ ಮತ್ತು ಸ್ನಾತಕೋತ್ತರ ಕಟ್ಟಡಕ್ಕೆ ಉಪ ಮುಖ್ಯ ಮಂತ್ರಿ ಸಿ.ಎನ್. ಅಶ್ವತ್ಥನಾರಯಣ ಅವರಿಂದ ಚಾಲನೆ:**

ರಾಮನಗರದಿಂದ ವಿಡಿಯೋ ಸಂವಾದದ ಮೂಲಕ ಉಪ ಮುಖ್ಯಮಂತ್ರಿ ಸಿ.ಎನ್. ಆಶ್ವತ್ಥನಾರಾಯಣ ಅವರು ರಾಮನಗರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪದವಿ ಮತ್ತು ಸ್ನಾತಕೋತ್ತರ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದಲ್ಲಿ ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಅಭಿವೃದ್ಧಿಯ ಮಹಾಪೂರವನ್ನೇ ಹರಿಸಿದ್ದಾರೆ ಎಂದು ತಿಳಿಸದರು. 50 ವರ್ಷಗಳ ತಮ್ಮ ರಾಜಕೀಯ ಜೀವನದಲ್ಲಿ ಹಲವಾರು ಏಳು ಬೀಳುಗಳನ್ನು ಎದುರಿಸಿ ಎಲ್ಲಾ ವಿಚಾರದಲ್ಲೂ, ಎಲ್ಲಾ ಕ್ಷೇತ್ರಗಳಲ್ಲೂ ಸಮಗ್ರ, ಸದೃಢ ನಿರ್ಧಾರಗಳನ್ನು ತೆಗೆದುಕೊಂಡು ಆಡಳಿತ ನಡೆಯ ವೈಖರಿ ಮಾದರಿಯಾಗಿದೆ.

2018ರ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಸಿಗದ ಸಮಯದಲ್ಲಿ ಪಕ್ಷದ ಮುಂದಾಳತ್ವ ವಹಿಸಿ ಆಡಳಿತದಲ್ಲಿ ಸ್ಥಿರತೆಯನ್ನು ಕಾಪಾಡಿಕೊಂಡು ಪಕ್ಷವು ಬಹುಮತ ಪಡೆಯಲು ವಹಸಿದ ನಡೆ ಇಂದು ಜನತೆಗೆ ಸ್ಥಿರ ಸರ್ಕಾರಕ್ಕೆ ಬುನಾದಿಯಾಗಿದೆ.

ಆರ್ಥಿಕ ಮುಗ್ಗಟ್ಟು ಲೆಕ್ಕಿಸದೆ, ರೈತರ ಏಳಿಗಗಾಗಿ ಸರ್ಕಾರ ಸದಾ ಮಾನ್ಯ ಮುಖ್ಯಮಂತ್ರಿಗಳ ಮುಂದಾಳತ್ವದಲ್ಲಿ ಶ್ರಮಿಸುತ್ತಿದೆ. ಬೆಳೆ ನಾಶವಾದಗ, ಬರ ಬಂದಂತಹ ಸಮಯದಲ್ಲಿ, ನೆರೆ ಬಂದಂತಹ ಸಮಯದಲ್ಲಿ, ರೈತರ ಕುಟುಬಂಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡ ನಿರ್ಧಾರಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸದರು.

ಇಂದು ರಾಮನಗರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪದವಿ ಮತ್ತು ಸ್ನಾತಕೋತ್ತರ ಕಟ್ಟಡ ನಿರ್ಮಾಣ ಶಿಲನ್ಯಾಸದಿಂದ ಇತಿಹಾಸ ನಿರ್ಮಾಣವಾಗಿದೆ ಎಂದು ಇದೇ ಸಮಯದಲ್ಲಿ ಉಪ ಮುಖ್ಯ ಮಂತ್ರಿ ಸಿ.ಎನ್. ಅಶ್ವತ್ಥನಾರಯಣ ತಿಳಿಸಿದರು.

**ಬಾಗಲಕೋಟೆಯಿಂದ ಉಪ ಮುಖ್ಯಮಂತ್ರಿ ಗೋವಿಂದ ಎಂ ಕಾರಜೋಳ ಅವರಿಂದ ಆಶಯ ನುಡಿ:**

ಬಾಗಲಕೋಟೆಯಿಂದ ಉಪ ಮುಖ್ಯಮಂತ್ರಿ ಗೋವಿಂದ ಎಂ ಕಾರಜೋಳ ಮಾತನಾಡಿ, 2019-20 ಹಾಗೂ 2020-21ನೇ ಸಂಕಷ್ಟಕರ ಸಾಲುಗಳ ನಡುವೆ ಮಾನ್ಯ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಅತ್ಯುತ್ತಮ ಆಡಳಿತ ನೀಡಿದ್ದಾರೆ.

2019-20ನೇ ಸಾಲಿನಲ್ಲಿ ಒಂದು ಕಡೆ ಬರ, ಇನ್ನೊಂದು ಕಡೆ ಪ್ರವಾಹ, ಆಸ್ತಿಪಾಸಿಗಳ ನಷ್ಟ, ಜನ-ಜಾನುವಾರುಗಳು ಪ್ರವಾಹದಿಂದ ಕೊಚ್ಚಿಹೋಗಿ ಅಪಾರ ಸಾವುನೋವು ಸಂಭವಿಸಿತು. ಇಂತಹ ಸಮಯದಲ್ಲಿ ಏಕಾಂಗಿಯಾಗಿ ಹೋರಾಟ ಮಾಡಿದ ಮುಖ್ಯಮಂತ್ರಿಗಳು ರಾಜ್ಯಕ್ಕೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿದರು.

ಸಾಂಕ್ರಾಮಿಕ ರೋಗದ ಕಾರಣ ಉದ್ದಿಮೆ, ವ್ಯಾಪಾರ ವಹಿವಾಟುಗಳ ಸ್ಥಗಿತದಿಂದಾಗಿ ಹತಾಶರಾದ ಅಸಂಘಟಿತ ವಲಯದ ಕಾಮಿಕರು, ರೈತರು, ಹೂವು ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ, ರೇಷ್ಮೇ ಬೆಳೆಗಾರರಿಗೆ, ನೇಕಾರರಿಗೆ, ಮತ್ತು ಮೀನುಗಾರರಿಗೆ, ಕಟ್ಟಡ ಕಾಮಿಕರಿಗೆ ವೃತ್ತಿ ನಿತರ ಕ್ಷೌರಿಕರಿಗೆ, ಮಡಿವಾಳರಿಗೆ, ಟ್ಯಾಕ್ಸಿ ಚಾಲಕರಿಗೆ, ಆಟೋ ಚಾಲಕರಿಗೆ, ಬಡವರಿಗೆ ಉಚಿತ ಪಡಿತರ ಹಾಗೂ ಧನ ಸಹಾಯ ಒದಗಿಸಿದ ಕೀರ್ತಿ ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲುತ್ತದೆ ಎಂದರು.

ಹೈದ್ರಾಬಾದ್ ಕರ್ನಾಟಕವನ್ನು ಗುಲಾಮಗಿರಿಯಿಂದ ಅಳಿಸಿ ಹಾಕಿ ಕಲ್ಯಾಣ ಕರ್ನಾಟಕ ಎಂದು ಪುನರ್ ನಾಮಕರಣ ಮಾಡಿ ಸುಮಾರು 500 ಕೋಟಿ ರೂಗಳ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿ ಪ್ರಾದೇಶಿಕ ಅಸಮತೋಲನೆಯನ್ನು ಅಳಿಸಿ ಹಾಕಲು ಶ್ರಮವಹಿಸಿದರು ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಬಣ್ಣಿಸಿದರು.

ಕಾರ್ಯಕ್ರಮದ ಮೊದಲು ಆರಂಭಿಕ ನುಡಿಗಳಾಡಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ನವ ತಂತ್ರಜ್ಞಾನವನ್ನು ಬಳಸಿಕೊಂಡು ರಾಜ್ಯ ಸರ್ಕಾರದ ಒಂದುವರ್ಷದ ಸಾಧನೆಯ ಸಂಬಂಧ ಇಂತಹ ಕಾರ್ಯಕ್ರಮವನ್ನು ಆಯೋಜಿಸಿರುವುದು ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಪ್ರಪ್ರಥಮವಾಗಿದೆ ಎಂದು ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಸಚಿವರು, ಶಾಸಕ್ರು, ಗಣ್ಯರು ಮತ್ತು ಮಾಧ್ಯಮಮಿತ್ರರನ್ನು ಸ್ವಾಗತಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಡಾ॥ ಪಿ.ಎಸ್. ಹರ್ಷ ಅವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ, ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾದ ನಳಿನ್ ಕುಮಾರ್ ಕಟೀಲ್, ಸಚಿವರಾದ ಸುರೇಶ್ ಕುಮಾರ್, ಆರ್. ಅಶೋಕ್, ಲೋಕಸಭಾ ಸದಸ್ಯರುಗಳು, ಶಾಸಕರು, ವಿಧಾನ ಪರಿಷತ್ತಿನ ಸದಸ್ಯರು ಹಾಗೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ ಭಾಸ್ಕರ್ ಅವರು ಸೇರಿದಂತೆ ಅನೇಕ ಗಣ್ಯರು ಮತ್ತು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಹಕಾರ ಸಂಘ-ಸಂಸ್ಥೆಗಳ ವಾರ್ಷಿಕ ಲೆಕ್ಕಪತ್ರಗಳ ನವೀಕರಣಕ್ಕೆ ಡಿ.31 ಕೊನೆಯ ದಿನ

ಬೆಂಗಳೂರು, ಜುಲೈ 27 (ಕರ್ನಾಟಕ ವಾರ್ತೆ): ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿ ನೋಂದಣಿಯಾದ ಪ್ರತಿಯೊಂದು ಸಹಕಾರ ಸಂಘಗಳು ಪ್ರತಿವರ್ಷ ಲೆಕ್ಕಪತ್ರಗಳನ್ನೂ ನವೀಕರಿಸಬೇಕಾಗಿರುತ್ತದೆ. ಆದರೆ ಅನೇಕ ಸಂಘ-ಸಂಸ್ಥೆಗಳು ಐದು ವರ್ಷಗಳಿಗೂ ಮೇಲ್ಪಟ್ಟು ನವೀಕರಣ ಮಾಡಿರುವುದಿಲ್ಲ. ಸಂಘ-ಸಂಸ್ಥೆಗಳ ಸದಸ್ಯರ ದೃಷ್ಟಿಯಿಂದ ಡಿಸೆಂಬರ್ 31, 2020ರ ಅಂತ್ಯದೊಳಗಾಗಿ ನವೀಕರೀಸಲು (ಫೈಲಿಂಗ್) ರಾಜ್ಯ ಸಹಕಾರ ಸಂಘಗಳ ನಿಬಂಧಕರು ಅನುಮತಿ ನೀಡಿದ್ದಾರೆ.

ಐದು ವರ್ಷಗಳಿಗೆ ಮೇಲ್ಪಟ್ಟು ನವೀಕರಿಸದ ಸಂಘ–ಸಂಸ್ಥೆಗಳಿಗೆ ಒಂದು ಬಾರಿ ಮಾತ್ರ ವರ್ಷವಾರು ರೂ.500/– ರಂತೆ ಹೆಚ್ಚುವರಿ ದಂಡ ವಿಧಿಸಿ ನವೀಕರಿಸಲಾಗುವುದು. ಡಿಸೆಂಬರ್ 31 ರೊಳಗೆ ನಿಗಧಿಪಡಿಸಿದ ದಾಖಲೆಗಳನ್ನು ಸಲ್ಲಿಸದ ಸಂಘಗಳ ರದ್ಧತಿಗೆ ಕ್ರಮವಹಿಸಲಾಗುವುದು. ಸಂಘದ ಎಲ್ಲಾ ಆಡಳಿತ, ಆಡಿಟ್ ವರದಿಗಳನ್ನು ಮುದ್ದಾಂ ಅಥವಾ ಆನ್‌ಲೈನ್‌ನಲ್ಲಿ ಸಲ್ಲಿಸಬಹುದು.

ಜಯನಗರ, ಪದ್ಮನಾಭನಗರ, ಬಿ.ಟಿ.ಎಂ.ಲೇಔಟ್,ಬೊಮ್ಮನಹಳ್ಳಿ, ಮಹದೇವಪುರ, ಕೆ.ಆರ್.ಪುರ ಬೆಂಗಳೂರು ದಕ್ಷಿಣ, ಆನೇಕಲ್ ವ್ಯಾಪ್ತಿಯ ಸಹಕಾರ ಸಂಘಗಳು ನವೀಕರಣಕ್ಕೆ ಸಂಬಂದಿಸಿದಂತೆ, ಸಂಘದ ಅಗತ್ಯ ದಾಖಲೆಗಳಾದ ಮೂಲ ಬೈಲಾ ಪ್ರತಿ, ಆಡಿಟ್ ವರದಿಗಳು, ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ, ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳು, ನೋಟಿಸ್, ಸಭೆಗೆ ಹಾಜರಾದ ಸದಸ್ಯರ ವಿವರ ಮತ್ತು ಅವರ ಸಹಿಯೊಂದಿಗೆ ನೋಂದಣಿ ಪ್ರಮಾಣ ಪತ್ರ ಮತ್ತು ಹಿಂದಿನ ಸಾಲಿನಲ್ಲಿ ಫೈಲಿಂಗ್ ಮಾಡಿರುವ ಬಗ್ಗೆ ಸ್ವೀಕೃತಿ ಪತ್ರ ಹಾಗೂ ಇನ್ನಿತರ ಅಗತ್ಯ ದಾಖಲಾತಿಗಳೊಂದಿಗೆ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು ನಗರ ಜಿಲ್ಲೆ, 3ನೇ ವಲಯ, ನಂ. 146, ಸಹಕಾರ ಸೌಧ, 2ನೇ ಮಹಡಿ, ಮಾರ್ಗೋಸಾ ರಸ್ತೆ, 8ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು–560003 ಇವರನ್ನು ಸಂಪರ್ಕಿಸುವಂತೆ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಆಯ್ಕೆಗಾಗಿ ಸಲ್ಲಿಸುವ ಅವಧಿಯ ವಿಸ್ತರಣೆ

ಬೆಂಗಳೂರು, ಜುಲೈ 27 (ಕರ್ನಾಟಕ ವಾರ್ತೆ): ಕೋವಿಡ್–19 ವೈರಸ್ ಹರಡುವಿಕೆಯಿಂದ ರಾಜ್ಯಾದ್ಯಂತ ಲಾಕ್‌ಡೌನ್ ಜಾರಿಯಾದ ಕಾರಣ, 2020ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾದ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಆಯ್ಕೆಗಾಗಿ ಸಲ್ಲಿಸುವ ಅವಧಿಯನ್ನು ಆಗಸ್ಟ್ 31ರ ವರೆಗೆ ವಿಸ್ತರಿಸಲಾಗಿದೆ.

ಲೇಖಕರು, ಲೇಖಕ–ಪ್ರಕಾಶಕರು ಹಾಗೂ ಪ್ರಕಟಣಾ ಸಂಸ್ಥೆಗಳ ದೂರವಾಣಿ ಮನವಿ ಮೇರೆಗೆ **ಉಪ ನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಹಂಪಿನಗರ, ಬೆಂಗಳೂರು–560104 ಇಲ್ಲಿ ಆಗಸ್ಟ್ 29 ರೊಳಗೆ ಕಾಪಿರೈಟ್ ಮಾಡಿಸಿ, ಕಾಪಿರೈಟ್ ಮಾಡಿಸಿರುವ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಆಯ್ಕೆಗಾಗಿ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು ಅದೇ ಕಛೇರಿಗೆ ಆಗಸ್ಟ್ 31 ರೊಳಗೆ ಸಲ್ಲಿಸಬಹುದು**.

ನಿಗಧಿತ ಅರ್ಜಿ ನಮೂನೆ ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಇಲಾಖಾ ಅಂತರ್ಜಾಲwww.karnatakapubliclibrary.gov.inಹಾಗೂ ರಾಜ್ಯದ ಎಲ್ಲಾ ಜಿಲ್ಲಾ/ನಗರಕೇಂದ್ರ ಗ್ರಂಥಾಲಯಗಳ ಉಪನಿರ್ದೇಶಕರು/ಮುಖ್ಯಗ್ರಂಥಾಲಯಾಧಿಕಾರಿಗಳ ಕಛೇರಿಗಳಲ್ಲಿ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ೦೮೦-೨೨೮೬೪೯೯೦, ೨೨೮೬೭೩೫೮ನ್ನು ಸಂಪರ್ಕಿಸಬಹುದಾಗಿದೆ ಎಂದು **ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ**

**ಐ.ಬಿ.ಪಿ.ಎಸ್. ರಾಷ್ಟ್ರೀಕೃತ ಬ್ಯಾಂಕ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆನ್‌ಲೈನ್ ತರಬೇತಿ**

ಬೆಂಗಳೂರು, ಜುಲೈ 27 (ಕರ್ನಾಟಕ ವಾರ್ತೆ):

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದಯಾನಿಲಯದ "ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ"ದ ವತಿಯಿಂದ ಐ.ಬಿ.ಪಿ.ಎಸ್. ರಾಷ್ಟ್ರೀಕೃತ ಬ್ಯಾಂಕ್ ನವರು ಒಂಭತ್ತು ಸಾವಿರ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಆನ್‌ಲೈನ್‌ನಲ್ಲಿ ನೀಡಲು ಆಯೋಜಿಸಿದೆ.

ಆಸಕ್ತರು 07ನೇ ಆಗಸ್ಟ್ 2020 (ರಜಾ ದಿನಗಳನ್ನು ಹೊರತುಪಡಿಸಿ) ರೊಳಗಾಗಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಹೆಸರನ್ನು ನೊಂದಾಯಿಸಿಕೊಳ್ಳಲು 0821-2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದೆಂದು ಕರಾಮುವಿ ಕುಲಸಚಿವರಾದ ಪ್ರೊ. ಲಿಂಗರಾಜಗಾಂಧಿ ರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಮಸ್ಯೆ-ಸವಾಲುಗಳ ವರ್ಷ: ಪರಿಹಾರದ ಸ್ಪರ್ಶ

ಬೆಂಗಳೂರು, ಜುಲೈ 27 (ಕರ್ನಾಟಕ ವಾರ್ತೆ): ಕಳೆದ ವರ್ಷದ ತೀವ್ರ ಬರ-ನೆರೆಯಂತಹ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ಪ್ರಸ್ತುತ ರಾಜ್ಯ ಸರ್ಕಾರ ಶತಮಾನದಲ್ಲೇ ಕಂಡರಿಯದ ಕೋವಿಡ್-19 ಸಮಸ್ಯೆ ಸೇರಿದಂತೆ ಹಲವು ಸಂಕಷ್ಟಗಳ ನಡುವೆಯೂ ದೃಢ ಸಂಕಲ್ಪದೊಂದಿಗೆ ಬಸವಾದಿ ಶರಣರ ಕನಸಿನ ಕಲ್ಯಾಣ ಕರ್ನಾಟಕ ಕಟ್ಟುವ ಸಂಕಲ್ಪದೊಂದಿಗೆ ಅಭಿವೃದ್ಧಿಯ ಪಥದಲ್ಲಿ ಒಂದು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಇಂದು ರಾಜ್ಯಾದ್ಯಂತ ವರ್ಚ್ಯುಯಲ್ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ರಾಜ್ಯಮಟ್ಟದ ಕಾರ್ಯಕ್ರಮವನ್ನು ವಿಧನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ 150 ಅಡಿ ವಿಶಾಲ ಎಲ್.ಇ.ಡಿ ಪರದೆಯ ಮೇಲೆ ರಾಜ್ಯದ 30 ಜಿಲ್ಲೆಗಳಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ನೇರವಾಗಿ ವೀಕ್ಷಿಸಬಹುದಾಗಿತ್ತು. ಅದೇ ರೀತಿಯಲ್ಲಿ ಜಿಲ್ಲಾ ಕಾರ್ಯಕ್ರಮಗಳಲ್ಲಿ ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಮುಖ್ಯಮಂತ್ರಿಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ವೀಕ್ಷಿಸಿದರು. ಇದೇ ಸಂದರ್ಭದಲ್ಲಿ ರಾಜ್ಯದ ಮೂಲೆ ಮೂಲೆಯಲ್ಲಿರುವ ಫಲಾನುಭವಿಗಳು ಮುಖ್ಯಮಂತ್ರಿಗಳಿಂದ ತಾವು ಪಡೆದ ಸಹಾಯವನ್ನು ಸ್ಮರಿಸಿ ಅವರಿಗೆ ಶುಭ ಹಾರೈಸಿದರು. ಅದರಲ್ಲಿ ಹಲವರು ಸಲ್ಲಿಸಿದ ಬೇಡಿಕೆಗಳಿಗೆ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದರು.

ಕೋವಿಟ್-19 ಹಿನ್ನಲೆಯಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ದೃಷ್ಟಿಯಿಂದ ಹಮ್ಮಿಕೊಳ್ಳಲಾಗಿದ್ದ ಈ ಕಾರ್ಯಕ್ರಮವನ್ನು ನವೀನ ತಂತ್ರಜ್ಞಾನವನ್ನು ಅಳವಡಿಸಿಕೊಂಡು ರಾಜ್ಯದಲ್ಲಿ ಏಕ ಕಾಲಕ್ಕೆ ಫಲಾನುಭವಿಗಳು, ಉಪ ಮುಖ್ಯಮಂತ್ರಿಗಳು, ಸಚಿವರುಗಳು ಹಾಗೂ ಜನಪ್ರತಿನಿಧಿಗಳು ಮುಖ್ಯಮಂತ್ರಿಗಳಿಗೆ ಶುಭ ಹಾರೈಸಿದರು.

2019 ರ ಜುಲೈನಲ್ಲಿ ಅಸ್ತಿತ್ವಕ್ಕೆ ಬಂದ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ರಾಜ್ಯ ಸರ್ಕಾರ ಕಳೆದ ಸಾಲಿನಲ್ಲಿ ಪ್ರಮುಖವಾಗಿ ಜಾರಿಗೆ ತಂದ ಕಾರ್ಯಕ್ರಮಗಳ ಒಂದು ನೋಟ:

**ರೈತರಿಗೆ ನೆರವು:**

* ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಫಲಾನುಭವಿಗಳಿಗೆ ರಾಜ್ಯ ಸರ್ಕಾರದಿಂದ ಪ್ರತಿ ಫಲಾನುಭವಿಗೆ ಹೆಚ್ಚುವರಿಯಾಗಿ 4,000/- ರೂ ಗಳನ್ನು ಅವರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ.

50 ಲಕ್ಷಕ್ಕೂ ಹೆಚ್ಚು ರೈತರಿಗೆ ಇದರಿಂದ ಅನುಕೂಲವಾಗಿದ್ದು, ಪ್ರವಾಹ ಸಂದರ್ಭದಲ್ಲಿ ಹಾಗೂ ಕೋವಿಡ್-19 ಸಂದರ್ಭದಲ್ಲಿ ರೈತರಿಗೆ ಈ ನೆರವು ಸಕಾಲಿಕವಾಗಿ ಒದಗಿ ಬಂದಿದೆ.

**ಪ್ರಕೃತಿ ಮುನಿಸು – ಪರಿಹಾರಕ್ಕೆ ಆದ್ಯತೆ:**

ರಾಜ್ಯದಲ್ಲಿ ಕಳೆದ 118 ವರ್ಷಗಳಲ್ಲೇ ಭಾರಿ ಮಳೆ ದಾಖಲು. ರಾಜ್ಯದ 25 ಜಿಲ್ಲೆಗಳ 119 ತಾಲ್ಲೂಕುಗಳು ಪ್ರವಾಸ ಪೀಡಿತ ತಾಲ್ಲೂಕುಗಳೆಂದು ಘೋಷಣೆ. ಕೇಂದ್ರ ಸರ್ಕಾರದ 1869 ಕೋಟಿ ರೂ. ನೆರವು ಸೇರಿದಂತೆ ಪರಿಹಾರ ವಿತರಣೆ. ಮೂಲ ಸೌಕರ್ಯ ದುರಸ್ತಿ, ಮತ್ತಿತರ ಕಾರ್ಯಗಳಿಗೆ ರಾಜ್ಯ ಸರ್ಕಾರದಿಂದ ಒಟ್ಟು 6108 ಕೋಟಿ ರೂ. ಬಿಡುಗಡೆ.

**ಗ್ರಾಮೀಣ ಅಭಿವೃದ್ಧಿ :**

ಗ್ರಾಮೀಣ ಪ್ರದೇಶದ ಜನಜೀವನ ಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಮನೆ ಮನೆಗೆ ಗಂಗೆ ಯೋಜನೆಯಡಿ 2023 ರೊಳಗೆ ಎಲ್ಲಾ ಗ್ರಾಮಿಣ ಪ್ರದೇಶದ ಮನೆಗಳಿಗೆ ನಲ್ಲಿಯ ಮೂಲಕ ನೀರು ಸಮರ್ಪಕ ಕಲ್ಪಿಸಲು ಯೋಜನೆ. 2020-21ನೇ ಸಾಲಿನಲ್ಲಿ 8984.52 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ 23.57 ಲಕ್ಷ ಗ್ರಾಮೀಣ ಮನೆಗಳಿಗೆ ಕಾರ್ಯಾತ್ಮಕ "ನಲ್ಲಿ" ಸಂಪರ್ಕ (FHTC) ಕಲ್ಪಿಸಲು ಗುರಿ.

**ಕೋವಿಡ್ -19 ಸೋಂಕು ನಿಯಂತ್ರಣ:**

ಕೋವಿಡ್-19 ಸೋಂಕು ತಡೆಗಟ್ಟಲು ತ್ವರಿತವಾಗಿ ಲಾಕ್‌ಡೌನ್ ಅನುಷ್ಠಾನ. ಲಾಕ್ಡೌನ್ ಅವಧಿಯಲ್ಲಿ ವಲಸೆ ಕಾರ್ಮಿಕರಿಗೆ ಸಮರ್ಪಕ ಆಹಾರ ಮತ್ತು ಪಡಿತರ ವಿತರಣೆ.

ಎಲ್ಲಾ ಜಿಲ್ಲಾ, ತಾಲ್ಲೂಕು ಆಸ್ಪತ್ರೆಗಳಲ್ಲಿ ಹೈ ಫ್ಲೋ ಆಕ್ಸಿಜನ್ ಸೌಲಭ್ಯ ಒದಗಿಸಲು ಕ್ರಮ ಮತ್ತು ಸೋಂಕಿತರಿಗೆ ಸಕಾಲದಲ್ಲಿ ಚಿಕಿತ್ಸೆ ನೀಡುವ ಮೂಲಕ ಜೀವರಕ್ಷಣೆಗೆ ಆದ್ಯತೆ.

**ಉದ್ಯಮಿಗಳ ಬೆಂಬಲ :**

ಸಣ್ಣ ಉದ್ಯಮಿಗಳಿಗೆ ವಿದ್ಯುತ್ ಬಿಲ್ಲಿನ ಫಿಕ್ಸೆಡ್ ಚಾರ್ಜ್ ಮನ್ನಾ. ಬೃಹತ್ ಕೈಗಾರಿಕೆಗಳಿಗೆ ಫಿಕ್ಸೆಡ್ ಚಾರ್ಜ್‌ನ್ನು ಪಾವತಿಯ ಬಡ್ಡಿರಹಿತ ಮುಂದೂಡಿಕೆ ಉಪಕ್ರಮಗಳ ಮೂಲಕ ಉದ್ಯಮಿಗಳಿಗೆ ಬೆಂಬಲ.

**ಮೀನುಗಾರರ ಸಾಲ ಮನ್ನಾ :**

ಮೀನುಗಾರರ 60 ಕೋಟಿ ರೂ. ಸಾಲಮನ್ನಾ, 23,507 ಮೀನುಗಾರರಿಗೆ , ವಿಶೇಷವಾಗಿ ಮಹಿಳಾ ಮೀನುಗಾರರ ವಾಣಿಜ್ಯ ಬ್ಯಾಂಕ್‌ಗಳಲ್ಲಿನ 50 ಸಾವಿರ ರೂ.ಗಳವರೆಗಿನ ಸಾಲ ಮನ್ನಾ.

**ನೇಕಾರರ ಸಾಲ ಮನ್ನಾ :**

ನೇಕಾರರ 98 ಕೋಟಿ ರೂ.ಸಾಲ ಮನ್ನಾ. 29,631 ನೇಕಾರರ ಸಹಕಾರಿ ಬ್ಯಾಂಕುಗಳಲ್ಲಿನ 1 ಲಕ್ಷ ರೂ.ವರೆಗಿನ ಸಾಲ ಮನ್ನಾ. 2019 ಜನವರಿಯಿಂದ ಮಾರ್ಚ್ 31ರ ಅವಧಿಯಲ್ಲಿ ಸಾಲ ಮರುಪಾವತಿ ಮಾಡಿದ ನೇಕಾರರಿಗೂ ಈ ಸೌಲಭ್ಯ ವಿಸ್ತರಣೆ. ಕೈಮಗ್ಗ ನೇಕಾರರಿಗೆ ವಾಷಿಕ ತಲಾ 2 ಸಾವಿರ ರೂ. ಆರ್ಥಿಕ ನೆರವು ನೀಡುವ 'ನೇಕಾರ ಸಮ್ಮಾನ್ ಯೋಜನೆ ' ಗೆ ಚಾಲನೆ.

**ಕಲ್ಯಾಣ ಕರ್ನಾಟಕ ಪರ್ವಕ್ಕೆ ಚಾಲನೆ:**

ಕಲ್ಯಾಣ ಕರ್ನಾಟಕ ಭಾಗದ 21 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಆದ್ಯತೆ. ಬಹು ವರ್ಷಗಳ ಬೇಡಿಕೆಯಲ್ಲಿದ್ದ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಕಲಬುರುತಿ ಪೀಠಕ್ಕೆ ಚಾಲನೆ. ಇದರಿಮದ ಈ ಭಾಗದ ಸರ್ಕಾರಿ ನೌಕರರಿಗೆ ಅನುಕೂಲ.

**ಕೈಗಾರಿಕಾ ಬೆಳವಣಿಗೆ :**

ಸ್ವಿಟ್ಜರ್ಲೆಂಡಿನ ದಾವೋಸ್ ನಲ್ಲಿ ನಡೆದ ವರ್ಲ್ಡ್ ಎಕನಾಮಿಕ್ ಫೋರಂ ಸಮಾವೇಶದಲ್ಲಿ ಪಾಲ್ಗೊಂಡ ಮುಖ್ಯಮಂತ್ರಿಗಳಿಂದ 40 ಕ್ಕೂ ಹೆಚ್ಚು ಜಾಗತಿಕ ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಪ್ರತ್ಯೇಕ ಮಾತುಕತೆ. ರಾಜ್ಯದಲ್ಲಿ ಬಂಡವಾಲ ಹೂಡಿಕೆ ಮಾಡುವಂತೆ ಮನವೊಲಿಕೆ. ರೈತರು ಹಾಗೂ ಉದ್ಯಮಿಗಖಿಗೆ ಅನುಕೂಲ ಕಲ್ಪಿಸಲು ಭೂಸುಧಾರಣ ಕಾಯ್ದೆ 1969ರ ಕಲಂ 109ಕ್ಕೆ ತಿದ್ದುಪಡಿ ಹಾಗೂ ಕಲಂ 79 ಎ,ಬಿ,ಸಿ ಮತ್ತು 80 ಪೂರ್ವಾನ್ವಯವಾಗಿ ರದ್ದು. ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗಿ ರಾಜ್ಯದಲ್ಲಿ ಕಲಬುರುಗಿ, ಬೀದರ್ ವಿಮಾನ ನಿಲ್ದಾಣಗಳಕಾರ್ಯಾರಂಭ. ಶಿವಮೊಗ್ಗ ಕಿರಿ ವಿಮಾನ ನಿಲ್ದಾಣ ಕಾಮಗಾರಿಗೆ ವೇಗ. ಕೈಗಾರಿಕೋದ್ಯಮಿಗಳ ಬೇಡಿಕೆಯ ಮಾನವ ಸಂಪನ್ಮೂಲ ಹಾಗೂ ಉದ್ಯೋಗಾಕಾಂಕ್ಷಿಗಳನ್ನು ಒಂದೇ ವೇದಿಕೆಯಡಿ ತರುವ ಸ್ಕಿಲ್ ಕನೆಕ್ಟ್ ಪೋರ್ಟಲ್ ಪ್ರಾರಂಭ.

**ಕೋವಿಡ್-19 : ವಿಶೇಷ ಪ್ಯಾಕೇಜ್:**

ಲಾಕ್ಡೌನ್ ಸಮಯದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಅಸಂಘಟಿತ ವಲಯದ ಕಾರ್ಮಿಕರು, ಹೂವು-ಹಣ್ಣು, ತರಕಾರಿ ಬೆಳೆದ ರೈತರು, ನೇಕಾರರು, ಟ್ಯಾಕ್ಸಿ, ಆಟೋ ಚಾಲಕರು, ಕ್ಷೌರಿಕರು, ಮಡಿವಾಳರು, ಚರ್ಮ ಕುಶಲಕರ್ಮಿಗಳಿಗೆ ಪರಿಹಾರ ಒದಗಿಸಲು 2,272 ಕೋಟಿ ರೂ. ಪ್ಯಾಕೇಜ್ ಘೋಷಣೆ ಹಾಗೂ ಸಣ್ಣ ಮತ್ತು ಬೃಹತ್ ಉದ್ಯಮದ ಕೈಗಾರಿಕಾ ವಲಯಕ್ಕೂ ಅನುಕೂಲ.

**ಬೆಂಗಳೂರು ನಗರದ ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಪ್ರತಿಮೆ ನಿರ್ಮಾಣ:**

ಬೆಂಗಳೂರು ನಗರದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಿರ್ಮಿಸಲು ರಾಜ್ಯ ಸರ್ಕಾರದ ಕ್ರಮಕೈಗೊಂಡಿದ್ದು, ಇದರ ಜೊತೆಯಲ್ಲಿ ಉದ್ಯಾನವನ್ನು ಸಹ ನಿರ್ಮಿಸಲಾಗುತ್ತಿದೆ.